ಸಾಕ್ಷಿಗೆ ದಿನಾಂಕಃ 16-01-2025 **ರಂದು** ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1) 2017 ರ ನಂತರ ನನಗೂ ಮತ್ತು ಆರೋಪಿಗೂ ಮನಸಾ ಮನಸು ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿನ ಸಿಸಿ ನಂಬರ 3573/2017 ರ ಪ್ರಕರಣದಲ್ಲಿ ನಾನು ಸಾಕ್ಷಿದಾರನಾಗಿದ್ದೆ ಎಂದರೆ ಸರಿ. ಸದರಿ ಪ್ರಕರಣವು ಪಿರ್ಯಾದುದಾರರಾದ ಮನೋಹರ ಮಾರುತಿ ಕರಿಗಾರ ಎನ್ನುವ ವಕೀಲರು ಇದೇ ಪ್ರಕರಣದ ಆರೋಪಿಯ ವಿರುದ್ಧ ಚೆಕ್ ಬೌನ್ಸ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರರಕಣವು ರಾಜಿ ಸಂಧಾನದ ಮೂಲಕ ಮಾನ್ಯ ಲೋಕ ಅದಾಲತ್ ಮುಂದೆ ರಾಜಿಯಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ಆರೋಪಿ ಮತ್ತು ಪಿರ್ಯಾದುದಾರರು ರೂ. 1,00,000/- ಗಳಿಗೆ ರಾಜಿ ಮಾಡಿಕೊಂಡಿದ್ದರು ಎಂದರೆ ಸರಿ. ನಾನು ಮಧ್ಯಸ್ಥಿಕೆ ವಹಿಸಿ ಆರೋಪಿಯ ಕಡೆಯಿಂದ ಎರಡು ಚೆಕ್ಕುಗಳನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ.

2) ಸದರಿ ಚೆಕ್ಕುಗಳ ಸಂಖ್ಯೆ 478839 ಮತ್ತು 478838 ರ ಚೆಕ್ಕುಗಳಾಗಿದ್ದವು ಎಂದರೆ ಸರಿಯಲ್ಲ. ಚೆಕ್ಕು ನಂಬರ 478839 ರ ಚೆಕ್ಕನ್ನು ಸಿಸಿ ನಂಬರ 3573/2017 ರ ಪಿರ್ಯಾದುದಾರರಾದ ಮನೋಹರ ಮಾರುತಿ ಕರಿಗಾರರವರು 2017 ನೇ ಸಾಲಿನಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ಕು

ಅಮಾನ್ಯಗೊಂಡಿರುವ ಕುರಿತು ಮನೋಹರ ಕರಿಗಾರ ವಕೀಲರು ಇದೇ ನ್ಯಾಯಾಲಯದಲ್ಲಿ ಚೆಕ್ ಬೌನ್ಸ ಪ್ರಕರಣ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರರಕಣದ ಪಿರ್ಯಾದುದಾರರು ಸಹ ಇದೇ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುತ್ತಾರೆ ಎಂದರೆ ಸರಿ. ಸದರಿ ಪ್ರಕರಣದ ಪಿರ್ಯಾದುದಾರರ ಪರ ವಕೀಲರಾದ ಕೆ ಆರ್ ಪವಾರ ವಕೀಲರು, ಪಿರ್ಯಾದುದಾರರಾದ ಮನೋಹರ ಮಾರುತಿ ಕರಿಗಾರ ವಕೀಲರು ಹಾಗೂ ನಾನು ಗೋಕಾಕ ನಗರದ ಅಂಬಿಗೇರ ಗಲ್ಲಿಯ ನಿವಾಸಿಗಳಾಗಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನಾನು ಮಾತ್ರ ಅಂಬಿಗೇರ ಗಲ್ಲಿಯ ನಿವಾಸಿಯಾಗಿರುತ್ತೇನೆ, ಸದರಿ ಪ್ರಕರಣದ ಪಿರ್ಯಾದುದಾರರು ಮತ್ತು ಅವರ ಪರ ವಕೀಲರು ಅಂಬಿಗೇರ ಗಲ್ಲಿಯ ನಿವಾಸಿಗಳು ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

3) ಸದರಿ ಮೇಲಿನ ಪ್ರಕರಣದಲ್ಲಿನ ಪಿರ್ಯಾದುದಾರರಿಗೆ ಈ ಪ್ರಕರಣದ ಆರೋಪಿಯ ಪರಿಚಯವನ್ನು ಸನ್ 2017 ನೇ ಸಾಲಿನಲ್ಲಿ ನಾನೇ ಮಾಡಿಸಿದ್ದೆ ಎಂದರೆ ಸರಿ. ಕೆ ಆರ್ ಪವಾರ ವಕೀಲರು, ಮಹಾಂತೇಶ ಪೂಜಾರಿ ವಕೀಲರು, ಮನೋಹರ ಕರಿಗಾರ ವಕೀಲರು ನನ್ನ ಮಾತು ಕೇಳುತ್ತಾರೆ ಎಂದರೆ ಸರಿಯಲ್ಲ. ಸದರಿ ಮೇಲಿನ ವಕೀಲರೊಂದಿಗೆ ನಾನು ಸ್ನೇಹ ಸಂಬಂಧ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೇಲಿನ ವಕೀಲರು ಸಹ ಗೋಕಾಕಿನಲ್ಲಿಯೇ ವೃತ್ತಿ ಮಾಡುತ್ತಾರೆ ಎಂದರೆ ಸರಿ.

4) ನಾನು 2007 ನೇ ಸಾಲಿನಿಂದ ಆರೋಪಿಯೊಂದಿಗೆ ಇಲ್ಲಿಯವರೆಗೆ ಹಣಕಾಸಿನ ವ್ಯವಹಾರ ಮಾಡಿರುತ್ತೇನೆ. ಯಾವ ಯಾವ ವರ್ಷದಂದು ಎಷ್ಟೆಷ್ಟು ಹಣಕಾಸಿನ ವ್ಯವಹಾರ ಮಾಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿ ಆಗಾಗ ನನ್ನಿಂದ ಹಣ ಪಡೆಯುವುದು ಮತ್ತು ಮರಳಿ ಕೊಡುವುದು ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಆರೋಪಿಗೆ ನಾನು ಹಣ ಕೊಡುವಾಗ ಬೇರೆ ಯಾರೂ ಇರುತ್ತಿರಲಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಆರೋಪಿ ನನಗೆ ಬೇಕಾದ ವ್ಯಕ್ತಿ ಆಗಿರುವುದರಿಂದ ನಾನೇ ಹಣ ಕೊಡುತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5) ದಿಃ 08-03-2024 ರಂದು ನಾನು ಆರೋಪಿಗೆ ರೂ. 2,50,000/- ಹಣವನ್ನು ನೀಡಿರುತ್ತೇನೆ ಎಂದು ದೂರಿನಲ್ಲಿ ತಿಳಿಸಿರುವ ಸಂಗತಿ ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ನಾನು ಬೆಳಿಗ್ಗೆ 10-30 ಗಂಟೆಗೆ ನನ್ನ ಮನೆಯಲ್ಲಿ ಹಣ ನೀಡಿರುತ್ತೇನೆ. ಸದರಿ ದಿನದಂದು ಮಹಾಂತೇಶ ಪೂಜಾರಿ ವಕೀಲರು ಸಹ ಹಾಜರಿದ್ದರು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 08-03-2024 ರಂದು ಆರೋಪಿ ಗೋಕಾಕಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ಆರೋಪಿ ನನ್ನಿಂದ ರೂ. 2,50,000/- ಹಣವನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ.

6)  2017 ನೇ ಸಾಲಿನಲ್ಲಿ ಆರೋಪಿಯ ಕಡೆಯಿಂದ ಪಡೆದುಕೊಂಡ ಎರಡು ಚೆಕ್ಕುಗಳಲ್ಲಿನ ಈ ಪ್ರಕರಣದ ಒಂದು ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಆರೋಪಿಯ ವಿರುದ್ಧ ಇದೊಂದು ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಆರ್ ಟಿ ಓ ಆಫೀಸಿನಲ್ಲಿ ಏಜೆಂಟ ಕೆಲಸ ಮಾಡುತ್ತಿರುವುದರಿಂದ 2017 ನೇ ಸಾಲಿನಲ್ಲಿ ಮನೋಹರ ಕರಿಗಾರ ವಕೀಲರಿಗೆ ಆರೋಪಿಯ ಪರಿಚಯ ಮಾಡಿಸಿರುತ್ತೇನೆ. ನಂತರ ಆರೋಪಿ ಮತ್ತು ಆ ಪ್ರಕರಣದ ಪಿರ್ಯಾದುದಾರರು ಪರಿಚಯಸ್ಥರಾಗಿರುತ್ತಾರೆ. 2017 ನೇ ಸಾಲಿನಲ್ಲಿ ಮನೋಹರ ಕರಿಗಾರ ವಕೀಲರ ಕಡೆಯಿಂದ ನಾನೇ ನಡುವೆ ಆಗಿ ಹಣ ಕೊಡಿಸಿದ್ದೆ. ಹಾಗೆ ಎಷ್ಟು ಹಣ ಕೊಡಿಸಿದ್ದೆ ಎಂಬುವುದು 8 ವರ್ಷಗಳು ಮುಗಿದಿರುವ ಕಾರಣ ನನಗೀಗ ನೆನಪಿಲ್ಲ. ಸದರಿ ಹಣಕಾಸಿನ ವ್ಯವಹಾರವು ಸುಸೂತ್ರವಾಗಿ ಬಗೆಹರಿಯದೆ ನ್ಯಾಯಾಲಯದಲ್ಲಿ ಮನೋಹರ ಕರಿಗಾರ ವಕೀಲರು ಚೆಕ್ ಬೌನ್ಸ ಕೇಸು ಹಾಕಿದ ನಂತರ ಲೋಕ ಅದಾಲತ್ ಮುಂದೆ ಮುಕ್ತಾಯಗೊಂಡಿತ್ತು ಎಂದರೆ ಸರಿ. 2017 ನೇ ಸಾಲಿನಲ್ಲಿ ನಾನು ನಡುವೆಯಾಗಿ ಮನೋಹರ ಕರಿಗಾರ ವಕೀಲರ ಕಡೆಯಿಂದ ಆರೋಪಿಗೆ ಕೊಡಿಸಿದ ಹಣವನ್ನು ಆರೋಪಿ ಒಪ್ಪಿದ ಸಮಯದಲ್ಲಿ ಹಣ ಪಾವತಿ ಮಾಡದೆ ಮಾತು ತಪ್ಪಿದ್ದಕ್ಕಾಗಿ ನಾನು ಆರೋಪಿಗೆ ಹಣ ನೀಡುವ ಸಮಯದಲ್ಲಿ ಆರೋಪಿ ಈ ಹಿಂದೆ ನಿಗದಿತ ಅವಧಿಯಲ್ಲಿ ಹಣ ಕೊಡದಿರುವ ಕಾರಣ ಆ ಕುರಿತು ನೀವೇನಾದರೂ ವಿಚಾರ ಮಾಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸದರಿ ವ್ಯವಹಾರ ನನ್ನ ಮತ್ತು ಆರೋಪಿಯ

ಮಧ್ಯ ಆಗಿರಲಿಲ್ಲ ಹೀಗಾಗಿ ನಾನು ಆ ಕುರಿತು ಪ್ರಶ್ನೆ ಮಾಡಿರಲಿಲ್ಲ ಎಂದು ನುಡಿಯುತ್ತಾರೆ.

7) ಸಿಸಿ 3573/2017 ರ ಪಿರ್ಯಾದುದಾರರ ಪರ ವಕೀಲರಾದ ಕೆ ಆರ್ ಪವಾರ ವಕೀಲರು ಸಹ ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿ. ಆರೋಪಿಯ ಕಡೆಯಿಂದ 2017 ನೇ ಸಾಲಿನಲ್ಲಿ ಪಡೆದುಕೊಂಡ ಎರಡು ಚೆಕ್ಕುಗಳಲ್ಲಿನ ಈ ಪ್ರಕರಣದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಆರೋಪಿಯ ವಿರುದ್ಧ ನಾನು ಇದೊಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 08-03-2024 ರಂದು ನಾನು ಆರೋಪಿಗೆ ನೀಡಿರುವುದಾಗಿ ತಿಳಿಸಿರುವ ರೂ. 2,50,000/- ಹಣ ಎಲ್ಲಿಂದ ತಂದು ನೀಡಿರುವ ಕುರಿತು ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಮನೆಯಲ್ಲಿ ಕೂಡಿಟ್ಟ ಹಣದಲ್ಲಿ ಆರೋಪಿಗೆ ಸದರಿ ದಿನದಂದು ರೂ. 2,50,000/- ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

8) ದಿಃ 30-07-2024 ರಂದು ಆರೋಪಿ ಈ ಪ್ರರಕಣದ ಚೆಕ್ಕನ್ನು ನನಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ 2017 ನೇ ಸಾಲಿನಲ್ಲಿ ಪಡೆದುಕೊಂಡ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ಕು ಮೇಲ್ನೋಟಕ್ಕೆ ಹಳೆಯ ಚೆಕ್ಕಾಗಿರುವುದು ಕಂಡು ಬರುತ್ತದೆ ಎಂದರೆ

ನನಗೆ ಗೊತ್ತಾಗುವುದಿಲ್ಲ. ಈ ಪ್ರಕರಣದ ನಿಪಿ-1 ರ ಚೆಕ್ಕನ್ನು ನಾನೇ ಬರವಣಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.